RNU AIR DHARWAD

JULY 12, 2025

AKASHAVANI - DHARWAD

PRADESH SAMACHARA (KANNADA) 7.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

- ಭಾರತೀಯ ಆಹಾರ ನಿಗಮ; ರಾಜ್ಯದ ವಿವಿಧೆಡೆ, ಆಧುನಿಕ ತಂತ್ರಜ್ಞಾನದ ಗೋದಾಮುಗಳ ನಿರ್ಮಾಣಕ್ಕೆ, ಯೋಜನೆ.
- 'ತೆರೆದ ಮನೆ'; ಹೆಣ್ಣು ಮಕ್ಕಳಿಗೆ ಸ್ವಯಂ ರಕ್ಷಣೆ ಕುರಿತು ಜಾಗ್ರತಿ ಮೂಡಿಸಲು, ರಾಜ್ಯಾದ್ಯಂತ ವಿಶೇಷ ಕಾರ್ಯಕ್ರಮ.
- ಮಧ್ಯಸ್ಥಿಕೆ ರಾಷ್ಟ್ರಕ್ಕಾಗಿ, ಧ್ಯೇಯದೊಂದಿಗೆ, ಇಂದು ರಾಜ್ಯದ ಎಲ್ಲ ನ್ಯಾಯಾಲಯಗಳಲ್ಲಿ, ಲೋಕ ಅದಾಲತ್.
- 16ನೇ ರೋಜಗಾರ ಮೇಳ; 51 ಸಾವಿರ ಯುವಜನರಿಗೆ, ಪ್ರಧಾನಮಂತ್ರಿಯವರಿಂದ, ಉದ್ಯೋಗ ನೇಮಕಾತಿ ಪತ್ರ ಪ್ರದಾನ.

<><><>

ಈಗ ವಾರ್ತೆಗಳ ವಿವರ

<><><>

ರಾಜ್ಯದ ವಿವಿಧೆಡೆ, ಒಂದು ಲಕ್ಷದ 74 ಸಾವಿರ ಟನ್ ಸಾಮರ್ಥ್ಯದ ಗೋದಾಮುಗಳನ್ನು, ಭಾರತೀಯ ಆಹಾರ ನಿಗಮ, ಎಫ್.ಸಿ.ಐ ವತಿಯಿಂದ ನಿರ್ಮಿಸಲಾಗುತ್ತಿದೆ ಎಂದು, ಕೇಂದ್ರ ಗ್ರಾಹಕ ವ್ಯವಹಾರ, ಆಹಾರ ಮತ್ತು ಸಾರ್ವಜನಿಕ ಪೂರೈಕೆ ಖಾತೆ ಸಚಿವ, ಪ್ರಲ್ಹಾದ ಜೋಶಿ ತಿಳಿಸಿದ್ದಾರೆ. ಹುಬ್ಬಳ್ಳಿಯ ಉಣಕಲ್‌ನಲ್ಲಿರುವ, ಭಾರತೀಯ ಆಹಾರ ನಿಗಮದ ಕಚೇರಿಗೆ ಭೇಟಿ ನೀಡಿ, ಪರಿಶೀಲಿಸಿದರು. ಹುಬ್ಬಳ್ಳಿಯಲ್ಲಿ 13 ಸಾವಿರ ಟನ್ ಸಾಮರ್ಥ್ಯದ, ಗೋದಾಮು ನಿರ್ಮಿಸಲಾಗುತ್ತಿದೆ. ನೂತನ ತಂತ್ರಜ್ಞಾನ ಬಳಸಿ, ಭಾರತೀಯ ಆಹಾರ ನಿಗಮ, ಸಾರ್ವಜನಿಕ ಹಾಗೂ ಖಾಸಗಿ ಸಹಭಾಗಿತ್ವದಲ್ಲಿ, ಹೊಸ ಗೋದಾಮುಗಳ ನಿರ್ಮಾಣಕ್ಕೆ ಯೋಜಿಸಿದೆ, ಎಂದರು.

<><><>

ಕೈಗಾರಿಕೆ ಉತ್ಪನ್ನಗಳ ಗುಣಮಟ್ಟ ಖಾತ್ರಿಪಡಿಸುವಲ್ಲಿ, ಭಾರತೀಯ ಗುಣಮಟ್ಟ ಮಾನಕ ಸಂಸ್ಥೆ – ಬ್ಯೂರೋ ಆಫ್ ಇಂಡಿಯನ್ ಸ್ಟ್ಯಾಂಡರ್ಡ್ಸ್ ಪಾತ್ರ, ಮಹತ್ವದ್ದಾಗಿದೆ ಎಂದು, ಕೇಂದ್ರ ಗ್ರಾಹಕ ವ್ಯವಹಾರ, ಆಹಾರ ಮತ್ತು ನಾಗರಿಕ ಪೂರೈಕೆ ಖಾತೆ ಸಚಿವ ಪ್ರಲ್ಹಾದ ಜೋಶಿ, ಹೇಳಿದ್ದಾರೆ. ಹುಬ್ಬಳ್ಳಿಯ ಬಿ.ಐ.ಎಸ್. ಶಾಖೆಗೆ ಭೇಟಿ ನೀಡಿ, ಅಧಿಕಾರಿಗಳೊಂದಿಗೆ ಅವರು ಸಮಾಲೋಚಿಸಿದರು. ಹುಬ್ಬಳ್ಳಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ, ಬಿ.ಐ.ಎಸ್ ಶಾಖೆ, ಕಿತ್ತೂರು ಕರ್ನಾಟಕ ಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ, ಕೈಗಾರಿಕಾ ಉತ್ಪನ್ನಗಳ ಗುಣಮಟ್ಟ ಪ್ರಮಾಣೀಕರಣಕ್ಕೆ ತುಂಬ ಸಹಕಾರಿಯಾಗಿದೆ, ಎಂದರು. ಕೈಗಾರಿಕಾ ಉತ್ಪನ್ನಗಳ ಉತ್ಕೃಷ್ಟತೆಯನ್ನು ಕೇಂದ್ರೀಕರಿಸಿ, ಭಾರತೀಯ ಗುಣಮಟ್ಟ ಮಾನದಂಡವನ್ನು, ಜಾಗತಿಕವಾಗಿ ಒಪ್ಪಿತ ಮಾನದಂಡವಾಗಿಸುವ ನಿಟ್ಟಿನಲ್ಲಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ದೂರದೃಷ್ಟಿಯಂತೆ, ಕಾರ್ಯನಿರ್ವಹಿಸುವಂತೆ, ಸಚಿವ ಪ್ರಲ್ಹಾದ ಜೋಶಿ, ಬಿ.ಐ.ಎಸ್. ಅಧಿಕಾರಿಗಳಿಗೆ ಸೂಚಿಸಿದರು.

<><><>

ಹೆಣ್ಣು ಮಕ್ಕಳ ನಾಪತ್ತೆ, ಬಾಲ ಗರ್ಭಿಣಿಯರು ಹಾಗೂ ಪೋಕ್ಸೋ ಪ್ರಕರಣಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ, 'ತೆರೆದ ಮನೆ' ಕಾರ್ಯಕ್ರಮದ ಮೂಲಕ, ರಾಜ್ಯದ ವಿದ್ಯಾರ್ಥಿನಿಯರಲ್ಲಿ, ವಸ್ತುಸ್ಥಿತಿಗಳ ಬಗ್ಗೆ, ಜಾಗೃತಿ ಮೂಡಿಸಲಾಗುವುದು ಎಂದು, ವಿಧಾನಮಂಡಲದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷ ಎನ್.ಎಚ್ ಕೋನರೆಡ್ಡಿ ತಿಳಿಸಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ, ಪ್ರಗತಿ ಪರಿಶೀಲಿಸಿ, ಮಾತನಾಡಿದರು. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 104 ಬಾಲ್ಯ ವಿವಾಹ ಪ್ರಕರಣಗಳು ವರದಿಯಾಗಿವೆ. ಒಂದು ನಾಪತ್ತೆ ಪ್ರಕರಣ ಪತ್ತೆಯಾಗಬೇಕಿದೆ ಎಂದರು.

<><><>

ಹಾವೇರಿ ಜಿಲ್ಲೆ ಬ್ಯಾಗವಾದಿಯಲ್ಲಿ ಪತ್ತೆಯಾದ, ಹೆಣ್ಣು ಮಕ್ಕಳ ಮಾರಾಟದ ಅಂತಾರಾಜ್ಯ ಪ್ರಕರಣಕ್ಕೆ ಸಂಬಂಧಿಸಿ, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿದೆ. ಸಂತ್ರಸ್ತ ಮಗುವಿಗೆ ನ್ಯಾಯ ಒದಗಿಸಲಾಗುವುದು ಎಂದು, ಆಯೋಗದ ಸದಸ್ಯ ಶೇಖರಗೌಡ ರಾಮತ್ನಾಳ ಭರವಸೆ ನೀಡಿದ್ದಾರೆ.

<><><>

ಕೇಂದ್ರ ಪುರಸ್ಕೃತ 'ಸುರಭಿ ಚಯನ್ ಶೃಂಖಲಾ' ಯೋಜನೆ ಅಡಿ, ವಿಶಿಷ್ಟ ತಳಿ ರಾಸುಗಳನ್ನು ಗುರುತಿಸಿ, ತಳಿ ಸಂವರ್ಧನೆಗಾಗಿ, ರಾಜ್ಯದಲ್ಲಿ ನೋಂದಾವಣೆ ನಡೆದಿದೆ. ಪಶು ಸಂಗೋಪನೆ ಮತ್ತು ಪಶುಪಾಲನಾ ವಿಭಾಗದ, ದಕ್ಷಿಣಕನ್ನಡ ಜಿಲ್ಲೆಯ, ಉಪ ನಿರ್ದೇಶಕ ಡಾಕ್ಟರ್ ಅರುಣಕುಮಾರ ಶೆಟ್ಟಿ ಮಾಹಿತಿ ನೀಡಿದ್ದಾರೆ. .

<><><>

ಡಾಕ್ಟರ ಅರುಣ ಕುಮಾರ ಶೆಟ್ಟಿ ಧ್ವನಿ 63 ಸೆಕೆಂದುಗಳು

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರಿಯುವುದು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ

<><><>

ಮಧ್ಯಸ್ಥಿಕೆ ರಾಷ್ಟ್ರಕ್ಕಾಗಿ, ಎಂಬ ಧ್ಯೇಯದೊಂದಿಗೆ, ಅಕ್ಟೋಬರ್ 7ನೇ ತಾರೀಖಿನ ವರೆಗೆ, ರಾಜ್ಯದ ಎಲ್ಲ ನ್ಯಾಯಾಲಯಗಳಲ್ಲಿ, ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರ, 90 ದಿನಗಳ ಜನತಾ ನ್ಯಾಯಾಲಯ ಆಯೋಜಿಸಿದೆ. ಲೋಕ್ ಅದಾಲತ್‌ನಲ್ಲಿ, ರಾಜೀ ಸಂಧಾನಕ್ಕೆ ಯೋಗ್ಯವಾಗಿರುವ ಪ್ರಕರಣಗಳನ್ನು, ಕಕ್ಷಿದಾರರ ಸಮಕ್ಷಮ ಹಾಗೂ ಒಪ್ಪಿಗೆಯೊಂದಿಗೆ, ಪ್ರತಿ ಶನಿವಾರ ಹಾಗೂ ಭಾನುವಾರದಂದು ಸಹ, ನ್ಯಾಯ ತೀರ್ಮಾನಿಸಲು, ರಾಜ್ಯ ಕಾನೂನು ಸೇವಾ ಪ್ರಾಧಿಕಾರ ತೀರ್ಮಾನಿಸಿದೆ. ಹಾವೇರಿ ಜಿಲ್ಲೆ, ಪ್ರಧಾನ ನ್ಯಾಯಾಧೀಶ ದೇವಿಂದ್ರಪ್ಪ ಬಿರಾದಾರ, ಮಾಹಿತಿ ನೀಡಿ, ಮಧ್ಯಸ್ಥಿಕೆ ಮೂಲಕ ರಾಜೀ ಆಗಬಹುದಾದ ಪ್ರಕರಣಗಳನ್ನು, ಅಭಿಯಾನದ ಮೂಲಕ ಇತ್ಯರ್ಥಪಡಿಸಲಾಗುವುದು ಎಂದರು. ಬೆಂಗಳೂರು ಗ್ರಾಮಾಂತರ ಜಿಲ್ಲೆ, ಪ್ರಧಾನ ಜಿಲ್ಲಾ ನ್ಯಾಯಾಧೀಶರಾದ ಕೆ.ಬಿ ಗೀತಾ ಮಾತನಾಡಿ, ತಾಲೂಕು ನ್ಯಾಯಾಲಯಗಳಲ್ಲಿ, ಮಧ್ಯಸ್ಥಿಕೆ ಕೇಂದ್ರಗಳ ಮೂಲಕ, ವ್ಯಾಜ್ಯ ತೀರ್ಮಾನಕ್ಕೆ ಯೋಜಿಸಲಾಗಿದೆ ಎಂದರು. ಧಾರವಾಡ, ಕಲಬುರಗಿ ಹಾಗೂ ಬೆಂಗಳೂರು ಉಚ್ಚ ನ್ಯಾಯಾಲಯಗಳ ಪ್ರಾಂಗಣದಲ್ಲಿರುವ, ಕಾನೂನು ಸೇವಾ ಪ್ರಾಧಿಕಾರದ ಘಟಕಗಳ ಮೂಲಕ, ವ್ಯಾಜ್ಯಗಳ ತೀರ್ಮಾನಕ್ಕೆ, ವ್ಯವಸ್ಥೆ ಮಾಡಲಾಗಿದೆ.

<><><>

ನೈಋತ್ಯ ರೇಲ್ವೆ, ಇಂದು ಬೆಳಗ್ಗೆ 9 ಗಂಟೆಗೆ, ಹುಬ್ಬಳ್ಳಿಯ ಕೇಶ್ವಾಪುರದ ಅಧಿಕಾರಿಗಳ ಕೂಟದ ಸಭಾಂಗಣದಲ್ಲಿ ರೋಜಗಾರ ಮೇಳ ಆಯೋಜಿಸಿದೆ. ಕೇಂದ್ರ ನವ ಮತ್ತು ನವೀಕರಿಸಬಹುದಾದ ಇಂಧನ ಖಾತೆ ಸಚಿವ ಪ್ರಲ್ಹಾದ್ ಜೋಶಿ ಪಾಲ್ಗೊಳ್ಳಲಿದ್ದಾರೆ. ಕೇಂದ್ರ ಸಣ್ಣ, ಮಧ್ಯಮ ಕೈಗಾರಿಕೆಗಳ ರಾಜ್ಯ ಖಾತೆ ಸಚಿವರಾದ, ಶೋಭಾ ಕರಂದ್ಲಾಜೆ, ಬೆಂಗಳೂರಿನಲ್ಲಿ ಆಯೋಜಿತ ರೋಜಗಾರ ಮೇಳಾದಲ್ಲಿ ಭಾಗವಹಿಸಲಿದ್ದಾರೆ. ಇಂದು ದೇಶದ 47 ವಿವಿಧ ಸ್ಥಳಗಳಲ್ಲಿ, 16 ನೇ ರೋಜಗಾರ ಮೇಳ ಆಯೋಜಿಸಲಾಗಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ವರ್ಚುವಲ್ ಮಾಧ್ಯಮದ ಮೂಲಕ ಈ ಮೇಳಕ್ಕೆ ಚಾಲನೆ ನೀಡಲಿದ್ದಾರೆ. ದೇಶದ 51 ಸಾವಿರ ಜನರಿಗೆ, ನೇಮಕಾತಿ ಪತ್ರ ವಿತರಿಸಲಿದ್ದಾರೆ.

<><><>

ರಾಜ್ಯದಲ್ಲಿ, ಪ್ರಸ್ತುತ ಹತ್ತು ವಂದೇ ಭಾರತ ರೈಲುಗಳಿಗೆ ಚಾಲನೆ ನೀಡಲಾಗಿದೆ ಎಂದು ಕೇಂದ್ರ ರೇಲ್ವೆ ಖಾತೆ ರಾಜ್ಯ ಸಚಿವ, ವಿ.ಸೋಮಣ್ಣ, ತಿಳಿಸಿದ್ದಾರೆ. ಬಳ್ಳಾರಿಯಲ್ಲಿ ರೇಲ್ವೆ ನಿಲ್ದಾಣದ ಕಾಮಗಾರಿ ಪರಿಶೀಲಿಸಿ, ಮಾತನಾಡಿದರು. ಚಿಕ್ಕ ಜಾಜೂರು ರೇಲ್ವೆ ನಿಲ್ದಾಣದ ಕಾಮಗಾರಿ ಸೇರಿದಂತೆ, ರೇಲ್ವೆ ಇಲಾಖೆ ಕೈಗೆತ್ತಿಕೊಂಡ, ರಾಜ್ಯದ ಹನ್ನೊಂದು ಬೃಹತ್ ಕಾಮಗಾರಿಗಳು, ಕಾಲಮಿತಿಯಲ್ಲಿ ಪೂರ್ಣಗೊಳ್ಳಲಿವೆ ಎಂಬ, ವಿಶ್ವಾಸ ವ್ಯಕ್ತ ಪಡಿಸಿದರು.

<><><>

ಮಾಜಿ ಸಭಾಪತಿ ಎನ್.ತಿಪ್ಪಣ್ಣ ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆ, ಇಂದು ಚಿತ್ರದುರ್ಗ ಜಿಲ್ಲೆ, ತುರವನೂರು ಗ್ರಾಮದಲ್ಲಿ, ನಡೆಯಲಿದೆ. ಬೆಂಗಳೂರಿನಲ್ಲಿ ಮಾತನಾಡಿದ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ತಿಪ್ಪಣ್ಣ ಅವರ ನಿಧನಕ್ಕೆ ಕಂಬನಿ ಮಿಡಿದಿದ್ದಾರೆ. ಉತ್ತಮ ಸಂಸದೀಯ ಪಟು ಹಾಗೂ ವಾಗ್ಮಿಯಾಗಿದ್ದ ತಿಪ್ಪಣ್ಣ ಅವರ ಪ್ರಾಮಾಣಿಕತೆ ಹಾಗೂ ಸರಳತೆ, ಇಂದಿನ ಯುವ ರಾಜಕಾರಣಿಗಳಿಗೆ, ಮಾರ್ಗದರ್ಶಿ ಎಂದರು.

<><><>

ಕೇಂದ್ರ ರೇಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ, ಬಳ್ಳಾರಿಯಲ್ಲಿ, ಎನ್.ತಿಪ್ಪಣ್ಣ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು. ತಿಪ್ಪಣ್ಣ ಅವರು ನೀಡಿದ ಕೊಡುಗೆಯನ್ನು ಸ್ಮರಿಸಿದರು.

<><><>

ವರಕವಿ ದ. ರಾ. ಬೇಂದ್ರೆ ಅವರ, ನಾಕುತಂತಿ ಕೃತಿಗೆ, ಜ್ಞಾನಪೀಠ ಪ್ರಶಸ್ತಿ ಪ್ರದಾನಗೊಂಡು, ಐದು ದಶಕಗಳು ಪೂರ್ಣಗೊಂಡಿವೆ. ಧಾರವಾಡದ ಸಾಧನಕೇರಿಯ ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ಭವನದಲ್ಲಿ, ಇಂದು ಬೆಳಗ್ಗೆ 10.30ಕ್ಕೆ, ಸಾಹಿತಿ ಜಿ.ಬಿ. ಹರೀಶ, ಈ ಕುರಿತು ಉಪನ್ಯಾಸ ನೀಡಲಿದ್ದಾರೆ.

<><><>

ಕೋಲಾರ ಜಿಲ್ಲೆಯಲ್ಲಿ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಐ.ಎ.ಎಸ್ ಮತ್ತು ಐ.ಪಿ.ಎಸ್ ತರಬೇತಿ ಕೇಂದ್ರ ಸ್ಥಾಪನೆಗೆ, ಹೊಳಲಿ ಗ್ರಾಮದಲ್ಲಿ 9 ಎಕರೆ ಸ್ಥಳ ಗುರುತಿಸಲಾಗಿದೆ ಎಂದು ಜಿಲ್ಲಾಧಿಕಾರಿ ಎಂ.ಆರ್. ರವಿ ತಿಳಿಸಿದ್ದಾರೆ. ಸಮುದಾಯ ಭವನಗಳ ನಿರ್ವಹಣೆಯನ್ನು, ಗ್ರಾಮ ಪಂಚಾಯಿತಿ ಮಟ್ಟದಲ್ಲಿ, ನಿರ್ವಹಣಾ ಸಮಿತಿಗಳ ಮೂಲಕ, ಸಮರ್ಪಕವಾಗಿ ನಿರ್ವಹಿಸಲು, ಅಗತ್ಯ ಕ್ರಮ ಕೈಗೊಳ್ಳುವಂತೆ, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳಿಗೆ, ಅವರು ನಿರ್ದೇಶಿಸಿದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

ಭಾರತೀಯ ಆಹಾರ ನಿಗಮ; ರಾಜ್ಯದ ವಿವಿಧೆಡೆ, ಆಧುನಿಕ ತಂತ್ರಜ್ಞಾನದ ಗೋದಾಮುಗಳ ನಿರ್ಮಾಣಕ್ಕೆ, ಯೋಜನೆ.

'ತೆರೆದ ಮನೆ'; ಹೆಣ್ಣು ಮಕ್ಕಳಿಗೆ ಸ್ವಯಂ ರಕ್ಷಣೆ ಕುರಿತು ಜಾಗ್ರತಿ ಮೂಡಿಸಲು, ರಾಜ್ಯಾದ್ಯಂತ ವಿಶೇಷ ಕರ್ಯಕ್ರಮ.

ಮಧ್ಯಸ್ಥಿಕೆ ರಾಷ್ಟ್ರಕ್ಕಾಗಿ, ಧ್ಯೇಯದೊಂದಿಗೆ, ಇಂದು ರಾಜ್ಯದ ಎಲ್ಲ ನ್ಯಾಯಾಲಯಗಳಲ್ಲಿ, ಲೋಕ ಅದಾಲತ.

16ನೇ ರೋಜಗಾರ ಮೇಳ; 51 ಸಾವಿರ ಯುವಜನರಿಗೆ, ಪ್ರಧಾನಮಂತ್ರಿಯವರಿಂದ, ಉದ್ಯೋಗ ನೇಮಕಾತಿ ಪತ್ರ ಪ್ರದಾನ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ

<><><>